ಶ್ರೀ ಎಚ್. ಸಿದ್ದವೀರಪ್ಪ.—ತಾಲ್ಲೂಕು ಬೋರ್ಡ್ ಚುನಾವಣೆಗೆ ಮತ್ತು ಪಂಚಾಯಿತಿ ಚುನಾವಣೆಗೆ ವೋಟರುಗಳು ಅವರೇ ಆಗಿರುವುದರಿಂದ ಎರಡು ಚುನಾವಣೆಗಳನ್ನೂ ಒಂದೇ ದಿವಸ ನಡೆಸಿದ್ದರೆ ಖರ್ಚು ಕಡಿಮೆಯಾಗುತ್ತಿತ್ತು. ಆದ್ದರಿಂದ ಎರಡನ್ನೂ ಒಟ್ಟಿಗೆ ಮಾಡಿದ್ದರೆ ವಿಹಿತವಾಗಿರುತ್ತಿರಲಿಲ್ಲವೇ, ಇದನ್ನು ಸರ್ಕಾರದವರು ಯೋಚನೆ ಮಾಡಲಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಎರಡು ಚುನಾವಣೆಗಳನ್ನೂ ಒಟ್ಟಿಗೇ ಮಾಡಬೇಕಾದರೆ ಕಾಯಿದೇ ಪ್ರಕಾರ ಆ ರೀತಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ವಿಮರ್ಶೆ ಮಾಡಿ ಮಾಡಬೇಕಾಗುತ್ತದೆ. ಆದರೆ ಈಗ ಚುನಾವಣೆಗಳನ್ನು ಕಾಯಿದೆ ಪ್ರಕಾರ ಮಾಡುತ್ತಿದೆ.

Sri H. SIDDAVEERAPPA.—Just as in the case of Loksabha and the Assembly on one and the same day the election is held. What about the economy ? Is it not a fact that your reason is different because in view of the impending Legislative Council Elections from the local bodies you have got some back boroughs. Is it not a fact that you do not want these boroughs to be dispensed with and reduce the number in the Upper House ?

ಶ್ರೀ ಪಿ. ಎಂ. ನಾಡಗೌಡ.—ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಎಲೆಕ್ಟೋರಲ್ ರೋಲ್ ಬೇರೆ ಬೇರೆ ಇರುವುದರಿಂದ ಬೇರೆ ಬೇರೆ ಚುನಾವಣೆಯನ್ನು ನಡೆಸಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಪಂಚಾಯಿತಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಬೇರೆ ಬೇರೆ ಎಲೆಕ್ಟೋರಲ್ ರೋಲ್ ಇವೆಯೆಂದು ತಾವು ಹೇಳಿದಿರಿ. ಎರಡಕ್ಕೂ ಒಂದೇ ಎಲೆಕ್ಟೋರಲ್ ರೋಲ್ ಇದ್ದರೆ ತಾವು ರಾಜೀನಾಮೆಯನ್ನು ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಪಂಚಾಯಿತಿಗೆ ಬೇರೆ ಎಲೆಕ್ಟೋರಲ್ ರೋಲ್ ಇರುತ್ತದೆ, ಅದರ ಜ್ಯೂರಿಸ್‌ಡಿಕ್ಷನ್ ವಿಲೇಜು ಅಥವಾ ಗ್ರೂಪ್ ವಿಲೇಜಸ್ ಇರುತ್ತದೆ. ಆದರೆ ತಾಲ್ಲೂಕು ಬೋರ್ಡಿಗೆ ಕಾನ್‌ಸ್ಟಿಟ್ಯೂಯೆನ್ಸಿ ಇದೇ ಆದರೂ ವೋಟ್ ಮಾಡಬೇಕಾದರೆ ಬೇರೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ಮಂತ್ರಿಗಳು ಹೇಳಿದ ಹಾಗೆ ಇನ್ನು ಎರಡು ಮೂರು ತಿಂಗಳಲ್ಲಿ ಪಂಚಾಯಿತಿಯ ಚುನಾವಣೆ ಮುಗಿಯುತ್ತದೆ, ಆನಂತರ ತಾಲ್ಲೂಕು ಬೋರ್ಡಿಗೆ ಚುನಾವಣೆಯನ್ನು ಮಾಡುವುದನ್ನು ಯೋಚನೆ ಮಾಡುತ್ತೇವೆ ಎಂದು. ನಾನು ಕೇಳುತ್ತೇನೆ ಮೂರು ತಿಂಗಳು ಆದಮೇಲೆ ಜೂನ್-ಜುಲೈ ತಿಂಗಳು ಬರುತ್ತವೆ. ಆಗ ಮಳೆಗಾಲ ಪ್ರಾರಂಭವಾಗುತ್ತದೆ. ಆದ್ದರಿಂದ ಮುಂದಿನ ವರ್ಷ ಎಂದರೆ 1969 ನೇ ಇಸವಿ ಫೆಬ್ರುವರಿ-ಮಾರ್ಚ್ ತಿಂಗಳಲ್ಲಿ ತಾಲ್ಲೂಕು ಬೋರ್ಡಿನ ಚುನಾವಣ್ ಮಾಡುವ ಹಾಗೆ ಆಲೋಚನೆ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ವಿಚಾರ ಮಾಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—8 ವರ್ಷಗಳ ಹಿಂದೆ ತಾಲ್ಲೂಕು ಮಂಡಳಿಗಳ ಚುನಾವಣೆಯನ್ನು ಸರ್ಕಾರದವರು ನಡೆಸಿದರು. 8 ವರ್ಷಗಳಿಂದೀಚೆಗೆ ನಾನಾ ಬವರಾವಣೆಗಳಾಗಿರುವುದರಿಂದ ಪ್ರಜಾ ಪ್ರಭುತ್ವದ ನೀತಿಗನುಗುಣವಾಗಿ ಅಲ್ಲಿಯ ನದನ್ಯರುಗಳು ತಮ್ಮ ಪ್ರಭಾವವನ್ನು ಕಳೆದುಕೊಂಡಿದ್ದಾರೆ. ಅವರು ಕಾನೂನು ಬದ್ಧವಾಗಿ ಅಸ್ತಿತ್ವದಲ್ಲಿರುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ಅವರನ್ನು ಸವನ್ಯತ್ವದಿಂದ ರದ್ದು ಮಾಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಈ ಬಗ್ಗೆ ಲಾ ಡಿಪಾರ್ಟ್‌ಮೆಂಟನ್ನು ಕೇಳಿದೆ. ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

Asphalting of Roads in Mudigere Taluk

91. Sri K. H. RANGANATH (Mudigere).—

Will the Minister for Public Works be pleased to state :—

(*a*) whether the Government had prepared any estimate to asphalt the roads between Kotegehar-Kalasa-Shamshe in Mudigere Taluk and if so, the estimated cost ;

(*b*) whether the said road would be asphalted this year ?

4.—Sri ALUR HANUMANTHAPPA (Deputy Minister for Minor Irrigation) [On behalf of SRI VEERENDRA PATIL (Minister for Public Works)].—

(*a*) An estimate amounting to Rs. 6,22,750 for asphalting Kotegehar-Kalasa Road has been prepared.

(*b*) No; this work is not included in the budget estimates of 1967-68.

Sri K. H. RANGANATH.—Has it come to the notice of the Government that this road is a most important road connecting Mangalore, Kalasa, Koppa and Sringeri?

† Sri ALUR HANUMANTHAPPA.—It is one of the important road. The Chief Engineer has already recommended to Government with regard to the utility of this road.

Sri K. H. RANGANATH.—Has it come to the notice of the Government that this road is so bad that no vehicles can move on the road?

Sri ALUR HANUMANTHAPPA.—It is not so bad. Anyway, the Chief Engineer has sent proposal to Government for Rs. 6,22,750 for asphalting and other improvements.

Sri K. H. RANGANATH.—Will the Government be pleased to know the experience of the Hon'ble Minister for Revenue who travelled along this road very recently and ascertain from him whether it is so bad or not?

ಶ್ರೀ ಬಿ. ರಾಚಯ್ಯ (ಕಂದಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಆ ರಸ್ತೆ ಬಹಳ ಕೆಟ್ಟು ಹೋಗಿದೆ, ರಿಪೇರಿ ಮಾಡಿಸಿ ಎಂದು ಬರೆದಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಲೆನಾಡು ಪ್ರದೇಶ ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ಸಂಪೂರ್ಣವಾಗಿ ವಿಮರ್ಶೆ ಮಾಡಿ ಉತ್ತರ ಹೇಳುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಮಲೆನಾಡಿನ ಎಲ್ಲ ರಸ್ತೆಗಳ ಬಗ್ಗೆ ಕೇಳುತ್ತಿದ್ದಾರೆ. ಈ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಒದಗಿಸಬಹುದು.

ಶ್ರೀ ಕೆ. ಎನ್. ವೀರಪ್ಪಗೌಡ.—ಹೋದ ವರ್ಷದಿಂದ ಇಲ್ಲಿಯವರೆಗೆ ಮಲೆನಾಡಿನ ಒಂದು ರಸ್ತೆಯನ್ನಾದರೂ ಸಹ ರಿಪೇರಿ ಮಾಡಿಸುವ ಬಗ್ಗೆ ಬಜೆಟ್‌ನಲ್ಲಿ ಸೇರಿಸಿದ್ದೀರಾ?

ಶ್ರೀ ಆಲೂರು ಹನುಮಂತಪ್ಪ.—ಬಜೆಟನ್ನು ಪರಿಶೀಲನೆ ಮಾಡಿ ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಈ ಪ್ರಶ್ನೆಯಲ್ಲಿ ಬಂದಿರುವ ರಸ್ತೆಯನ್ನು ಮಾತ್ರ ಬಜೆಟ್‌ನಲ್ಲಿ ಸೇರಿಸಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—1968-69 ನೇ ಸಾಲಿನಲ್ಲಿ ಈ ರಸ್ತೆಯ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆಯನ್ನು ಸರ್ಕಾರದವರು ಕೊಡುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ರಸ್ತೆಗಳಿಗಾಗಿ ಹೆಚ್ಚು ಹಣವನ್ನು ಒದಗಿಸಿಲ್ಲ. ಎಲ್ಲ ಅವಶ್ಯಕತೆ ಇದೆಯೋ, ಯಾವ ಭಾಗದಲ್ಲಿ ಅವಶ್ಯಕವಾಗಿ ಮಾಡಬೇಕಾಗಿದೆಯೋ ಅಂತಹ ಕಡೆಗಳಲ್ಲಿ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಸೋಲೂರು ಸಿದ್ದಪ್ಪ.—ಆಹಾರದ ಅಭಾವವಿರುವುದರಿಂದ ರಸ್ತೆಗಳ ಕೆಲಸವನ್ನು ನಿಲ್ಲಿಸಿ ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೀರಾ, ಏಕೆಂದರೆ ರಸ್ತೆಗಳು ಮಾಮೂಲಾಗಿ ಎರ್ರಾಬಿರ್ರಿ ಕಡೆಗಳಲ್ಲೂ ಇವೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.